ಗುರುತಿಸಿದಾಗ, 'ಬಾಯಿಹರುಕ ರಾಜಕಾರಣಿಗಳ ಜೊತೆ ದಿನಾ ಮಾತಾಡಿ ಮಾತಾಡಿ ನಿನಗೂ ಹಾಗೇ ಆಗಿದೆ' ಎಂದು ಮಲ್ಲಿಕಾ ತಿವಿದಿದ್ದಳು. 'ಆಬ್ಸಲ್ಯೂಟ್ಲೀ ಕರೆಕ್ಟ್' ಎಂದಿದ್ದ ರಮೇಶ್, 'ಈ ವಾತಾವರಣ, ಈ ಸಿಟಿ... ಇವೆಲ್ಲವನ್ನೂ ಬಿಡದೆ ನನಗಂತೂ ಇದರಿಂದ ಮುಕ್ತಿಯಿಲ್ಲ' ಎಂದಿದ್ದ. ಹಠಾತ್ತನೆ ಹೊರಬಿದ್ದ ಅವನ ತೀರ್ಮಾನಕ್ಕೆ ದಂಗಾದ ಮಲ್ಲಿಕಾ ಅವನ ಕುತ್ತಿಗೆಗೆ ಆತುಕೊಂಡಿದ್ದಳು. ಇಬ್ಬರೂ ಈ ಕೆಲಸ ಬಿಟ್ಟು, ಈವರೆಗೆ ಕೂಡಿಟ್ಟ ಹಣದ ಜೊತೆಗೆ ಗೆಳೆಯರ ಬಳಿ ಇನ್ನಷ್ಟು ಹಣ ಎತ್ತಿ, ಹೊಸ ರೀತಿಯ ಸ್ಕೂಲೊಂದನ್ನು ಮಾಡಬೇಕೆಂದು ಪ್ಲಾನ್ ಹಾಕುತ್ತಿದ್ದುದು ಇಂಥ ಗಳಿಗೆಗಳಲ್ಲೇ.



ಸ್ಕೂಲಿನ ಮಾತು ಶುರುವಾದ ಕೆಲವು ತಿಂಗಳ ನಂತರ ಮಲ್ಲಿಕಾ ಎರಡು ವಾರ ವೈರಲ್ ಜ್ವರದಿಂದ ಸುಸ್ತಾಗಿ ಮಾತು ಕೂಡ ಆಡಲಾಗದೆ ಮಲಗಿದ್ದಾಗ ಇದ್ದಕ್ಕಿದ್ದಂತೆ ಕಣ್ಣು ಬಿಟ್ಟು ರಮೇಶನ ಮುಖ ನೋಡುತ್ತಾ, 'ಸ್ಕೂಲ್ ಪ್ಲ್ಯಾನ್ ಏನಾಯ್ತು?...' ಎಂದು ಕೊರಗುತ್ತಾ, ವಾಕ್ಯ ಮುಗಿಯುವ ಮೊದಲೇ ಸುಸ್ತಾಗಿ ಕಣ್ಣು ಮುಚ್ಚಿದ್ದಳು. ಅವಳ ಜ್ವರದ ಸುಸ್ತಿನ ನಡುವೆ ಸ್ಕೂಲಿನ ವಿಷಯ ಅವಳನ್ನು ಕಾಡುತ್ತಿದ್ದುದನ್ನು ಕಂಡು ರಮೇಶನಿಗೆ ಅಚ್ಚರಿಯಾಯಿತು. ಸದಾ ಮಾತಾಡುವುದನ್ನು ಸುಖಿಸುವ ಮಲ್ಲಿಕಾ, ಅವತ್ತು ವಾಕ್ಯ ಕೂಡ ಮುಗಿಸದೆ ಬಾಯಿ ಮುಚ್ಚಿಕೊಂಡಿದ್ದನ್ನು ನೋಡಿ ಅಯ್ಯೋ ಅನ್ನಿಸಿತು; ಅವಳು ಓದು ಮುಗಿಸಿ ಮುಂಬೈಯಿಂದ ಬಂದ ಹೊಸದರಲ್ಲಿ ಕಾಮಾ, ಫುಲ್ ಸ್ಟಾಪುಗಳಿಲ್ಲದೆ ಶರವೇಗದಲ್ಲಿ ಮಾತಾಡುತ್ತಾ ತನ್ನನ್ನು ಸದಾ ಉತ್ಸಾಹದಲ್ಲಿ, ಉಲ್ಲಾಸದಲ್ಲಿ ಇಡುತ್ತಿದ್ದುದು ನೆನಪಾಯಿತು. ಈಚೀಚೆಗೆ ಅದೇ ಶರವೇಗದಲ್ಲಿ ಇತರರ ಬಗೆಗೆ ಅವಳು ಕಟ್ಟುತ್ತಿದ್ದ ರೋಚಕ ಕತೆಗಳೂ ನೆನಪಿಗೆ ಬಂದವು. 'ಅವಳು ನನಗೆ ದೋಖಾ ಮಾಡಿದ್ದಾಳೆ', 'ಇವನು ನನ್ನ ಬೆನ್ನಿಗೆ ಚೂರಿ ಹಾಕಿದ್ದಾನೆ' ಎಂದು ಮಲ್ಲಿಕಾ ಈಚೆಗೆ ಕೊಡುತ್ತಿದ್ದ ಪಟ್ಟಿಯನ್ನು ರಮೇಶ್ ಮನಸ್ಸಿನಲ್ಲೇ ತಿರುವಿ ಹಾಕಿದ. ಅದರಲ್ಲಿ ತಾನು ಬಲ್ಲ ಹತ್ತಾರು ಹುಡುಗ, ಹುಡುಗಿಯರ ಹೆಸರುಗಳಿದ್ದವು.

ಅದರ ಜೊತೆಗೇ, ಇತ್ತಿತ್ತಲಾಗಿ ಯಾರಾದರೂ ತಮ್ಮ ಕಷ್ಟಗಳ ಬಗ್ಗೆ ಹೇಳಿಕೊಂಡಾಗಲೆಲ್ಲ ಮಲ್ಲಿಕಾ ನಗುತ್ತಿದ್ದ ವಿಕಟ ನಗೆ ರಮೇಶನಿಗೆ ನೆನಪಾಯಿತು. ಮಲ್ಲಿಕಾ ಆರನೇ ಕ್ಲಾಸಿನಲ್ಲಿದ್ದಾಗಲೋ ಏನೋ, 'ನಾಗಿನ್' ಎಂಬ ಹಿಂದಿ ಸಿನಿಮಾ ನೋಡಿದ್ದಳಂತೆ; ಆ ಕಾಲದಿಂದ ಹೀಗೆ ವಿಕಟ